# ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.

## ಮಾದರಿ ಪ್ರಶ್ನೆಪತ್ರಿಕೆ–01

**ವಿಷಯ: ಸಮಾಜ ವಿಜ್ಞಾನ** **ತರಗತಿ: 10ನೇ ತರಗತಿ**

**ಅಂಕಗಳು: 80** **ಸಮಯ: 3 ಗಂಟೆ 15 ನಿಮಿಷಗಳು**

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ ಅಥವಾ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ.** **8x1=8**

1. **ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೊಳಿಸಿದವನು**
   A) ಲಾರ್ಡ್ ಡಾಲ್ ಹೌಸಿ B) ಲಾರ್ಡ್ ವೆಲ್ಲೆಸ್ಲಿ
   C) ಲಾರ್ಡ್ ಕಾರ್ನ್ ವಾಲೀಸ್ D) ಲಾರ್ಡ್ ವಿಲಿಯಂ ಬೆಂಟಿಂಕ್
2. **1773ರ ರೆಗ್ಯುಲೇಟಿಂಗ್ ಕಾಯ್ದೆಯ ಮುಖ್ಯ ಉದ್ದೇಶ**
   A) ಕಂಪನಿಯ ಆಡಳಿತವನ್ನು ವಿಸ್ತರಿಸುವುದು B) ಕಂಪನಿಯ ಪರವಾನಗಿಯನ್ನು ವಿಸ್ತರಿಸುವುದು
   C) ಕಂಪನಿಯ ಆಡಳಿತವನ್ನು ನಿಯಂತ್ರಿಸುವುದು D) ಕಂಪನಿಯ ಆಡಳಿತವನ್ನು ಅಂತ್ಯಗೊಳಿಸುವುದು
3. **ಭಾರತದ ವಿದೇಶಾಂಗ ನೀತಿಯು ವಸಾಹತುಶಾಹಿತ್ವಕ್ಕೆ ವಿರುದ್ಧವಾಗಿದೆ. ಏಕೆಂದರೆ**
   A) ಭಾರತವು ವಸಾಹತುಗಳನ್ನು ಸ್ಥಾಪಿಸಿತ್ತು B) ಭಾರತವು ವಸಾಹತುಶಾಹಿತ್ವಕ್ಕೆ ಒಳಪಟ್ಟಿತ್ತು.
   C) ಭಾರತವು ವಸಾಹತುಗಳನ್ನು ಹೊಂದಲು ಬಯಸಿತ್ತು. D) ಭಾರತವು ತನ್ನೆಲ್ಲಾ ವಸಾಹತುಗಳನ್ನು ಕಳೆದುಕೊಂಡಿತು.
4. **'ಮಾನವಕುಲ ತಾನೊಂದೇ ವಲಂ' ಎಂಬುದರ ಅರ್ಥ**
   A) ಮಾನವರೆಲ್ಲರೂ ಒಂದೇ B) ಮಾನವರಲ್ಲಿ ಭಿನ್ನತೆಗಳಿವೆ
   C) ಮಾನವರಲ್ಲಿ ಅಸಮಾನತೆಯಿದೆ D) ಮಾನವರಲ್ಲಿ ತಾರತಮ್ಯವಿದೆ.
5. **ಚಿಪ್ಕೋ ಚಳುವಳಿಯ ಮುಖ್ಯ ಪರಿಣಾಮವೆಂದರೆ**
   A) ಅನೇಕ ಜೀವ ಸಂಕುಲಗಳ ರಕ್ಷಣೆಯಾಯಿತು B) ಮರ ಕಡಿಯಲು ಸರ್ಕಾರ ನೀಡಿದ್ದ ಅನುಮತಿ ರದ್ದಾಯಿತು.
   C) ಅಣೆಕಟ್ಟೆಯ ನಿರ್ಮಾಣ ಸ್ಥಗಿತಗೊಂಡಿತು D) ಅಣುಶಕ್ತಿ ಸ್ಥಾವರ ಸ್ಥಳಾಂತರಗೊಂಡಿತು
6. **ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳು ಸಂಧಿಸುವುದು**
   A) ಅರಾವಳಿ ಬೆಟ್ಟಗಳಲ್ಲಿ B) ಅಮರಕಂಟಕ ಬೆಟ್ಟಗಳಲ್ಲಿ
   C) ರಾಜಮಹಲ್ ಬೆಟ್ಟಗಳಲ್ಲಿ D) ನೀಲಗಿರಿ ಬೆಟ್ಟಗಳಲ್ಲಿ
7. **ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯ**
   A) ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುವುದು
   B) ಪಂಚವಾರ್ಷಿಕ ಯೋಜನೆಗಳಿಗೆ ಅನುಮೋದನೆ ನೀಡುವುದು
   C) ಸಂಪನ್ಮೂಲಗಳನ್ನು ಅಂದಾಜು ಮಾಡುವುದು
   D) ಆದಾಯವನ್ನು ಸಮನಾಗಿ ಹಂಚುವುದು.
8. **ಸುರೇಶನು ಅಮೆಜಾನ್ ಕಂಪನಿಯ ಮೂಲಕ ಹೊಸ ವಾಷಿಂಗ್ ಮಿಷನ್ ಖರೀದಿಸಿದ್ದಾನೆ. ಇಲ್ಲಿ ಅವನು ಬಳಸಿದ ಮಾರುಕಟ್ಟೆಯ ವಿಧ**
   A) ಆಮದು ವ್ಯಾಪಾರ B) ಚಿಲ್ಲರೆ ವ್ಯಾಪಾರ
   C) ಟೆಲಿ ಶಾಪಿಂಗ್ D) ಸಗಟು ವ್ಯಾಪಾರ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಲಾರ್ಡ್ ವೆಲ್ಲೆಸ್ಲಿಯು ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಇಂಗ್ಲೆಂಡಿಗೆ ತೆರಳಬೇಕಾಯಿತು. ಏಕೆ?
10. ಮೊದಲನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?
11. ಕರ್ನಾಟಕ ಸರ್ಕಾರವು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಏಕೆ ಸ್ಥಾಪಿಸಿದೆ?
12. ತಾರತಮ್ಯದಿಂದ ಉಂಟಾದ ಪೂರ್ವಾಗ್ರಹವು ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುತ್ತದೆ. ಹೇಗೆ?
13. ಇತ್ತೀಚೆಗೆ ಭಾರತದಿಂದ ಅಭ್ರಕದ ರಫ್ತು ಕಡಿಮೆಯಾಗಿದೆ.ಏಕೆ?
14. ಭಾರತದಲ್ಲಿ ಪೆಟ್ರೋಲಿಯಂನ್ನು ಮೊದಲು ಎಲ್ಲಿ ಪತ್ತೆ ಮಾಡಲಾಯಿತು?
15. ಪ್ರತ್ಯಕ್ಷ ತೆರಿಗೆ ಎಂದರೇನು?
16. ಉದ್ಯಮಶೀಲತೆ ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳು/ ಅಂಶಗಳಲ್ಲಿ ಉತ್ತರಿಸಿ. 8x2=16**

17. ಬ್ರಹ್ಮ ಸಮಾಜದ ಬೋಧನೆಗಳಾವುವು?
18. ಜುನಾಗಡ್ ಸಂಸ್ಥಾನವು ಹೇಗೆ ಭಾರತದೊಂದಿಗೆ ವಿಲೀನಗೊಂಡಿತು?
19. ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸಿ.

**ಅಥವಾ**

ಮಾನವ ಹಕ್ಕುಗಳ ರಕ್ಷಣೆಗಾಗಿ ಭಾರತ ಹೇಗೆ ಪ್ರಯತ್ನಿಸುತ್ತಿದೆ?

20. ಬಾಲ ಕಾರ್ಮಿಕತೆಯ ಪರಿಣಾಮಗಳನ್ನು ತಿಳಿಸಿ.

**ಅಥವಾ**

ಬಾಲ್ಯ ವಿವಾಹದಿಂದಾಗುವ ಪರಿಣಾಮಗಳನ್ನು ತಿಳಿಸಿ.

21. ಅರಣ್ಯನಾಶಕ್ಕೆ ಕಾರಣಗಳನ್ನು ವಿವರಿಸಿ.
22. ಭಾರತದ ವಾಯುಗುಣವು ಹಲವಾರು ಅಂಶಗಳಿಂದ ಪ್ರಭಾವಿತವಾಗಿದೆ. ಸ್ಪಷ್ಟೀಕರಿಸಿ.
23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ.
24. ಬಳಕೆದಾರರ ಶೋಷಣೆಗೆ ಕಾರಣಗಳೇನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳು/ ಅಂಶಗಳಲ್ಲಿ ಉತ್ತರಿಸಿ. 9x3=27**

25. ಮಾರ್ತಾಂಡವರ್ಮನ ಆಡಳಿತ ಭಾರತದ ಇತಿಹಾಸದಲ್ಲಿ ಪ್ರಮುಖ ಕಾಲಘಟ್ಟವಾಗಿ ಗುರುತಿಸಲ್ಪಡುತ್ತದೆ. ಸಮರ್ಥಿಸಿ.
26. ಬ್ರಿಟಿಷರ ಭೂಕಂದಾಯ ನೀತಿಗಳಿಂದಾದ ಪರಿಣಾಮಗಳನ್ನು ವಿವರಿಸಿ.
27. ಸ್ವಾಮಿ ವಿವೇಕಾನಂದರು ಭಾರತೀಯ ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ.

**ಅಥವಾ**

ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಡಾ. ಬಿ.ಆರ್ ಅಂಬೇಡ್ಕರ್‌ರವರು ನಡೆಸಿದ ಹೋರಾಟವನ್ನು ವಿವರಿಸಿ.

28. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್) ಪಾತ್ರವನ್ನು ವಿಶ್ಲೇಷಿಸಿ.
29. ನಿರುದ್ಯೋಗವು ಅತ್ಯಂತ ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. ಹೇಗೆ?
30. ವಿವಿಧೋದ್ದೇಶ ನದಿಕಣಿವೆ ಯೋಜನೆಗಳ ಉದ್ದೇಶಗಳನ್ನು ಪಟ್ಟಿಮಾಡಿ.
31. ಭಾರತದಲ್ಲಿ ರಸ್ತೆಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ.

**ಅಥವಾ**

ಭೂಕಂಪನದ ಮುನ್ನೆಚ್ಚರಿಕೆ ಕ್ರಮಗಳನ್ನು ಪಟ್ಟಿಮಾಡಿ.

32. ಸಾರ್ವಜನಿಕ ಹಣಕಾಸು ವೈಯುಕ್ತಿಕ ಹಣಕಾಸಿಗಿಂತ ಹೇಗೆ ಭಿನ್ನವಾಗಿದೆ?

**ಅಥವಾ**

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿಯು ಹೆಚ್ಚಿನ ಮಹತ್ವ ಪಡೆದಿದೆ. ಹೇಗೆ?

33. ಅಂಚೆ ಕಚೇರಿಗಳು ಇತ್ತೀಚಿನ ದಿನಗಳಲ್ಲಿ ಅನೇಕ ಹಣಕಾಸಿನ ಸೇವೆಗಳನ್ನು ಒದಗಿಸುತ್ತಿವೆ. ಸಮರ್ಥಿಸಿ.

**ಅಥವಾ**

ಹೊಸದಾಗಿ ಉದ್ಯಮಗಳನ್ನು ಪ್ರಾರಂಭಿಸುವವರಿಗೆ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಹಲವಾರು ಸೇವೆಗಳನ್ನು ಒದಗಿಸುತ್ತಿವೆ.ಸಮರ್ಥಿಸಿ

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳು/ ಅಂಶಗಳಲ್ಲಿ ಉತ್ತರಿಸಿ. 4X4=16**

34. ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಪಾತ್ರವನ್ನು ವಿವರಿಸಿ.
35. ಭಾರತದ ಪ್ರಥಮ ಸ್ವತಂತ್ರ ಸಂಗ್ರಾಮದ ವಿಫಲತೆಗೆ ಕಾರಣವಾದ ಅಂಶಗಳನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧದಿಂದಾದ ಪರಿಣಾಮಗಳನ್ನು ವಿವರಿಸಿ.

36. ಭ್ರಷ್ಟಾಚಾರವನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.
37. "ಮಣ್ಣಿನ ಸವೆತವನ್ನು ತಡೆಗಟ್ಟುವ ಹಲವಾರು ವಿಧಾನಗಳಿವೆ". ಸಮರ್ಥಿಸಿ.

**VI. 38. ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಅಂಶಗಳನ್ನು ಗುರುತಿಸಿ. 5X1=5**

a) ಕರ್ಕಾಟಕ ಸಂಕ್ರಾಂತಿ ವೃತ್ತ
b) ಪಂಪಸಾಗರ
c) ಕೈಗಾ
d) ಭಾರತದ ಹೆಬ್ಬಾಗಿಲು
e) ಸಿಲ್ಚಾರ್
f) ಸೂರತ್
g) ರಾಮನಾಥಪುರಂ

***********************